ನಿರಾಕರಣವಾದ. 'Freedom on Parole' ಸೌಂದರ್ಯಾತ್ಮಕತೆಗಿಂತ ನೈತಿಕಮೌಲ್ಯಗಳಿಗೆ ಸಂಬಂಧಿಸಿದ್ದು. ಮನುಷ್ಯನ ಸ್ವಾತಂತ್ರ್ಯವು ಷರತ್ತುಬದ್ಧವಾದದ್ದು ಎಂದು ಹೇಳಲು ಬಯಸಿದೆ. ಜೈಲಿನಿಂದ ನಿಮ್ಮನ್ನು ಹೊರಹೋಗಲು ಬಿಡುವುದು 'ಪರೋಲ್'. ಇಲ್ಲಿ 'ಪರೋಲ್' ಎಂದರೆ ಮಾತು, ಪದ. ಭಾಷೆಯಿಂದ, ಅರಿವಿನಿಂದ ನೀವು ಸ್ವತಂತ್ರವಾಗಿರುವಿರಿ ಎಂದು.

◆ **ಅಂದರೆ ನಿಮಗೆ ವಾಕ್ ಸ್ವಾತಂತ್ರ್ಯ ಬಹಳ ಮುಖ್ಯವೇ?**

ಖಂಡಿತ. ಹದಿಹರೆಯಕ್ಕೆ ಕಾಲಿಟ್ಟಾಗಿನಿಂದಲೂ ಸ್ವಾತಂತ್ರ್ಯದ ರಹಸ್ಯದ ಬಗ್ಗೆ ತಲೆಕೆಡಿಸಿಕೊಂಡಿದ್ದೇನೆ. ಸ್ವಾತಂತ್ರ್ಯ ಎನ್ನುವುದು ಅದನ್ನು ಮಿತಿಗೊಳಿಸುವ ಇಲ್ಲವೇ ನಿರಾಕರಿಸುವ ವಸ್ತುವಿನ ಮೇಲೆ ಅವಲಂಬಿತವಾಗಿದೆ. ಅದು ವಿಧಿ, ದೇವರು, ದೈಹಿಕ ಇಲ್ಲವೇ ಸಾಮಾಜಿಕ ಯಾವುದಾದರೂ ಆಗಿರಬಹುದು. ವಿಧಿ ತನ್ನ ಹವಣಿಕೆಯನ್ನು ಪೂರೈಸಲು ಸ್ವಾತಂತ್ರ್ಯವನ್ನು ಸಂಕೀರ್ಣಗೊಳಿಸುತ್ತದೆ. ಸ್ವತಂತ್ರವಾಗಿರಬೇಕೆಂದರೆ ವಿಧಿಯನ್ನು ಮೀರಬೇಕು. ಸ್ವಾತಂತ್ರ್ಯ ಮತ್ತು ವಿಧಿಯ ಜಿಜ್ಞಾಸೆ ಗ್ರೀಕ್ ದುರಂತ ಮತ್ತು ಶೇಕ್ಸ್‌ಪಿಯರ್‌ನ ವಸ್ತು. ಶೇಕ್ಸ್‌ಪಿಯರ್‌ನಲ್ಲಿ ವಿಧಿಯು ಪ್ರೀತಿ, ಹೊಟ್ಟೆಕಿಚ್ಚು, ಮಹತ್ವಾಕಾಂಕ್ಷೆಯಾಗಿ ಮತ್ತು ಅವಕಾಶವಾಗಿ ಬರುತ್ತದೆ. ಸ್ಪಾನಿಷ್ ರಂಗಭೂಮಿಯಲ್ಲಿ, ಅದರಲ್ಲೂ ಕ್ಯಾಲ್ಡೆರಾನ್ ಮತ್ತು ಟಿರ್ಸೊ ಡಿ ಮೊಲಿನಾ (ಸ್ಪಾನಿಷ್ ನಾಟಕಕಾರರು) ಇವರಲ್ಲಿ ಸ್ವಾತಂತ್ರ್ಯದ ರಹಸ್ಯವು ದೈವದ ಮುನ್ನೆಚ್ಚರಿಕೆಯಂತೆ, ಸ್ವತಂತ್ರ ಇಚ್ಛೆಯಂತೆ ಕ್ರಿಶ್ಚಿಯನ್ ಧರ್ಮಶಾಸ್ತ್ರದಲ್ಲಿ ಇರುವಂತೆ ಕಂಡುಬರುತ್ತದೆ. ಷರತ್ತುಬದ್ಧ ಸ್ವಾತಂತ್ರ್ಯದ ಕಲ್ಪನೆಯು ವೈಯಕ್ತಿಕ ಜವಾಬ್ದಾರಿಯನ್ನು ಸೂಚಿಸುತ್ತದೆ. ನಾವೆಲ್ಲರೂ ಅಕ್ಷರಶಃ ನಮ್ಮ ಸ್ವಾತಂತ್ರ್ಯವನ್ನು ಸೃಷ್ಟಿಸಿಕೊಳ್ಳುತ್ತೇವೆ ಇಲ್ಲವೇ ನಾಶಪಡಿಸಿಕೊಳ್ಳುತ್ತೇವೆ. ಸ್ವಾತಂತ್ರ್ಯ ಎನ್ನುವುದು ಯಾವಾಗಲೂ ಅನಿಶ್ಚಿತ. ಹಾಗಾಗಿ, ಆ ಶೀರ್ಷಿಕೆಯ ಕಾವ್ಯಾತ್ಮಕ ಅಥವಾ ಸೌಂದರ್ಯಾತ್ಮಕ ಅರ್ಥ, ಕಾವ್ಯದ ಸ್ವತಂತ್ರ ಭಾಷೆಯನ್ನು ಮೀರಿ ನಿಲ್ಲುವಂತಹದ್ದು.

◆ **ನೀವು 'Freedom on Parole' ಪುಸ್ತಕವನ್ನು 1935 ಮತ್ತು 1957ರ ನಡುವೆ ಅಂದರೆ, ಇಪ್ಪತ್ತಕ್ಕಿಂತ ಹೆಚ್ಚು ವರ್ಷಗಳ ಕಾಲ ಬರೆದಿರುವಿರಿ.**

ಆ ಪುಸ್ತಕವನ್ನು ಹಲವು ಬಾರಿ ತಿದ್ದಿ ಬರೆದಿದ್ದೇನೆ.

◆ **ಅದು ಆತ್ಮಕತೆಯೇ?**

ಹೌದು ಮತ್ತು ಇಲ್ಲ. ಅದು ನನ್ನ ಹದಿಹರೆಯದಿಂದ ಹಿಡಿದು ಪ್ರಬುದ್ಧತೆಯ ಹಂತದವರೆಗಿನ ಸೌಂದರ್ಯಾತ್ಮಕ ಹಾಗೂ ವೈಯಕ್ತಿಕ ಅನುಭವಗಳನ್ನು ಕಟ್ಟಿಕೊಡುತ್ತದೆ. ಅದರಲ್ಲಿನ ಮೊದಲ ಕವಿತೆಗಳನ್ನು ಬರೆದಾಗ ನನಗೆ ಇಪ್ಪತ್ತೊಂದು ವರ್ಷ. ಅದರ ಕಡೆಯ ಕವಿತೆಯನ್ನು ಬರೆದು ಮುಗಿಸಿದಾಗ ನಲವತ್ತೊಂರು ವರ್ಷ. ಆದರೆ, ಆ ಕವನಗಳ ನಾಯಕ ಅಕ್ಟೇವಿಯೊ ಪಾಜ್ ಅಲ್ಲ. ಅರ್ಧ ಸತ್ಯ ಅರ್ಧ ಪುರಾಣ ಪಾತ್ರವಾದ ಕವಿ. ಆ ಕವಿ ನನ್ನ ವಯಸ್ಸಿನವನಾದರೂ, ನನ್ನ ಭಾಷೆಯನ್ನೇ ಮಾತಾಡುತ್ತಿದ್ದರೂ, ನಮ್ಮ ಆಲೋಚನೆಗಳಲ್ಲಿ ಸಾಮ್ಯತೆಯಿದ್ದರೂ ಅವನು ಬೇರೆ. ಸಂಪ್ರದಾಯದಿಂದ ಪಡೆದ ಪ್ರತಿಮೆ ಅವನು. ಪ್ರತಿ ಕವಿಯು ಆ ಕ್ಷಣದ ಮಟ್ಟಿಗೆ ಆ ಪ್ರತಿಮೆಯ ಮರುಜನ್ಮವೇ ಆಗಿರುತ್ತಾನೆ.

◆ **'The Labyrinth of Solitude'ಗೆ ಆತ್ಮಕಥನಾತ್ಮಕ ಆಯಾಮ ಇಲ್ಲವೇ?**